**ಪ್ರಧಾನ ದಿವಾಣಿ ನ್ಯಾಯಾಧೀಶರು ಹಾಗೂ ಪ್ರ. ದ. ನ್ಯಾ. ದಂಡಾಧಿಕಾರಿಗಳ ನ್ಯಾಯಾಲಯ, ಗೋಕಾಕ**

**ಸಿ.ಸಿ. ನಂ. 1787/2022**

ಪಿರ್ಯಾದುದಾರರುಃ ಸಂಜಯ್ ಮೋಹನ್ ಸಾತಪುತೆ,

**- ವಿರುದ್ದ -**

ಆರೋಪಿತರು: ಕಲ್ಲಯ್ಯ ವಿರುಪಾಕ್ಷಯ್ಯ ಇಂದರಗಿಮಠ

**ದಂಡ ಪ್ರಕ್ರಿಯೆ ಸಂಹಿತೆ ಕಲಂ. 313 ರ ಪ್ರಕಾರ ಆರೋಪಿತರ ಹೇಳಿಕೆ**

ಪ್ರಶ್ನೆ 1. ಅಭಿಯೋಜನೆಯ ಪರ ಸಾಕ್ಷಿದಾರರು ಹೇಳಿರುವ ಸಾಕ್ಷ್ಯಗಳನ್ನು ಕೇಳಿಸಿಕೊಂಡಿದ್ದೀರಾ?

ಉತ್ತರಃ *ಕೇಳಿಸಿಕೊಂಡಿರುತ್ತೇನೆ*

ಪ್ರಶ್ನೆ 2. ಚಾಸಾ.1/ಸಂಜಯ್ ಮೋಹನ್ ಸಾತಪುತೆ ಇವರು ತಮ್ಮ ಸಾಕ್ಷ್ಯದಲ್ಲಿ, ಆರೋಪಿಯಾದ ನೀವು ಪರಿಚಯಸ್ಥರಾಗಿರುತ್ತೀರಿ, ಹೀಗಿರುವಾಗ ಆರೋಪಿಯಾದ ನೀವು ನಿಮ್ಮ ಗುತ್ತಿಗೆ ಕೆಲಸದೊಂದಿಗೆ ಸ್ಟೀಲ್ ಇಂಡಸ್ಟ್ರಿಯನ್ನು ಅಭಿವೃದ್ಧಿ ಪಡಿಸುವ ಸಲುವಾಗಿ ಡಿಸೆಂಬರ್-2020ರಲ್ಲಿ ಪಿರ್ಯಾದುದಾರರಿಗೆ ರೂ.21,00,000/-ಗಳ ಕೈಗಡ ಸಾಲ ಕೇಳಿದ್ದು, ಅದಕ್ಕೆ ಪಿರ್ಯಾದುದಾರರು ರೂ.20,11,800/-ಗಳನ್ನು ದಿನಾಂಕ 13-01-2021 ರಿಂದ 07-06-2021ರ ದಿನಗಳ ಒಳಗೆ ಹಣವನ್ನು ಆರೋಪಿಯಾದ ನಿಮಗೆ ನೀಡಿರುತ್ತಾರೆ. ಹೀಗಿರುವಾಗ ಆರೋಪಿಯಾದ ನೀವು ಸದರಿ ಸಾಲದ ಹಣವನ್ನು06 ತಿಂಗಳ ಒಳಗಾಗಿ ಮರಳಿ ಕೊಡುತ್ತೇನೆಂದು ತಿಳಿಸಿರುತ್ತಿರಿ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?

ಉತ್ತರಃ *ಪಿರ್ಯಾದುದಾರರ ಮಗನಾದ ರಾಹುಲ ಸಂಜಯ ಸಾತಪುತೆ ಮತ್ತು ನಾನು ಜಂಟಿಯಾಗಿ ನಮ್ಮ ಊರಾದ ಗಣೇಗೇರಾ ಗ್ರಾಮದಲ್ಲಿ ಕಲ್ಯಾಣಿ ಸ್ಟೀಲ್ಸ ಹೆಸರಿನ ಮೇಲೆ ಗ್ರ್ಯಾಂಡಿಂಗ್ ಮೇಲೆ ಉದ್ಯೋಗ ಮಾಡುತ್ತಿದ್ದು, ಸದರಿ ಉದ್ಯೋಗಕ್ಕೆ ಹಣಕಾಸಿನ ಅವಶ್ಯಕತೆ ಇರುವುದರಿಂದ ನಾನು ಪಿರ್ಯಾದುದಾರರ ಕಡೆಯಿಂದ ರೂ.20,11,000/- ಹಣವನ್ನು ಪಡೆದಿರುವುದು ನಿಜ ಇರುತ್ತದೆ. ಅದರಲ್ಲಿ ಸ್ವಲ್ಪ ಸ್ವಲ್ಪ ಹಣವನ್ನು ದಿ.26.07.2021 ರವರೆಗೆ ನೀಡಿ ಕೇವಲ ರೂ.9,35,000/- ಹಣ ಕೊಡುವುದು ಬಾಕಿ ಉಳಿಸಿಕೊಂಡಿದ್ದೆ. ಆ ಕುರಿತು ನಮ್ಮ ಮತ್ತು ಪಿರ್ಯಾದುದಾರರ ಹಿರಿಯರ ಸಮಕ್ಷಮ ಪಿರ್ಯಾದುದಾರರು ಬರವಣಿಗೆ ಮಾಡಿಕೊಂಡು ನನ್ನ ಸಹಿ, ಸಾಕ್ಷಿದಾರರ ಸಹಿ, ಪಿರ್ಯಾದುದಾರರ ಸಹಿ ಹಾಗೂ ಪಿರ್ಯಾದುದಾರರ ಮಗನಾದ ರಾಹುಲ ರವರ ಸಹಿಯನ್ನು ಸದರಿ ದಾಖಲೆಗೆ ಪಡೆದುಕೊಂಡು ತಮ್ಮ ಬಳಿ ಇಟ್ಟುಕೊಂಡಿರುತ್ತಾರೆ. ಅದರ ಪೊಟೋವನ್ನು ನಾನು ನನ್ನ ಮೊಬೈಲ್‌ನಲ್ಲಿ ತೆಗೆದುಕೊಂಡಿರುತ್ತೇನೆ. ಉಳಿದ ರೂ.9,35,000/- ಹಣದ ಭದ್ರತೆಗಾಗಿ ಪಿರ್ಯಾದುದಾರರು ನನ್ನ ಖಾತೆಗೆ ಸೇರಿದ 05 ಖಾಲಿ ಚೆಕ್ಕುಗಳ ಮೇಲೆ ಸಹಿ ಪಡೆದುಕೊಂಡಿದ್ದರು. ನಂತರ ಪಿರ್ಯಾದುದಾರರ ವಿನಂತಿಯ ಮೇರೆಗೆ ನಾನು ಪಿರ್ಯಾದುದಾರರ ಮಗನಾದ ರಾಹುಲ ಸಂಜಯ ಸಾತಪುತೆ ಇವರ ಖಾತೆಗೆ ಪೋನ್ ಪೇ ಮುಖಾಂತರ ರೂ.75,000/- ಹಣವನ್ನು ವರ್ಗಾವಣೆ ಮಾಡಿರುತ್ತೇನೆ, ಪಿರ್ಯಾದುದಾರರಿಗೆ ರೂ.1,50,000/- ಹಣವನ್ನು ನಗದಾಗಿ ನೀಡಿರುತ್ತೇನೆ. 2021 ರ ನವೆಂಬರ್ ತಿಂಗಳಿನಲ್ಲಿ ಪಿರ್ಯಾದುದಾರರು ನನ್ನ ಕಡೆಯಿಂದ ಭದ್ರತೆಗಾಗಿ ಪಡೆದುಕೊಂಡ 05 ಚೆಕ್ಕುಗಳಲ್ಲಿನ ಒಂದು ಚೆಕ್ಕನ್ನು ಪಿರ್ಯಾದುದಾರರ ಮಗನಾದ ರಾಹುಲ ಸಾತಪುತೆ ಇವರ ಹೆಸರು ಬರೆದು ರೂ.5,35,000/- ಹಣವನ್ನು ನಗದೀಕರಣ ಮಾಡಿಕೊಂಡಿರುತ್ತಾರೆ. ನಾನು ಈಗ ಪಿರ್ಯಾದುದಾರರಿಗೆ ಕೇವಲ ರೂ.1,00,000/- ದಷ್ಟು ಮಾತ್ರ ಕೊಡುವುದು ಬಾಕಿ ಉಳಿಸಿಕೊಂಡಿರುತ್ತೇನೆ.*

ಪ್ರಶ್ನೆ 3. ಇದೇ ಸಾಕ್ಷಿದಾರರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, 06 ತಿಂಗಳು ಮುಗಿದಾದ ನಂತರ ಪಿರ್ಯಾದುದಾರರು ಆರೋಪಿಯಾದ ನಿಮಗೆ ಸದರಿ ಸಾಲದ ಹಣವನ್ನು ಮರು ಪಾವತಿ ಮಾಡುವಂತೆ ಕೇಳಿದಾಗ, ಆರೋಪಿಯಾದ ನೀವು ರೂ.8,90,000/- ಹಣವನ್ನು ಮಾತ್ರ ಪಾವತಿ ಮಾಡಿದ್ದು, ಉಳಿದ ರೂ.11,22,800/- ಸಾಲದ ಹಣವನ್ನು ಪಾವತಿ ಮಾಡಿರುವುದಿಲ್ಲ, ನಂತರ ಪಿರ್ಯಾದುದಾರರು ಮತ್ತೊಮ್ಮೆ ಸಾಲದ ಹಣವನ್ನು ಮರುಸಂದಾಯ ಮಾಡುವಂತೆ ವಿನಂತಿಸಿಕೊಂಡಾಗ ಕೊನೆಗೆ ನೀವು ದಿಃ 20-04-2022 ರಂದು ನಿಮ್ಮ ಖಾತೆಯಾದ ಸ್ಟೇಟ್ ಬ್ಯಾಂಕ ಆಫ್ ಇಂಡಿಯಾ ಶಾಖೆ ಗಿಣಿಗೇರ ಇಲ್ಲಿಗೆ ಸೇರಿದ ಚೆಕ್ ನಂ.589125 ನೇದ್ದನ್ನು ರೂ.11,22,800/- ಎಂದು ನಮೂದು ಮಾಡಿ ಪಿರ್ಯಾದುದಾರರಿಗೆ ನೀಡಿರುತ್ತಿರಿ ಎಂದು ಸಾಕ್ಷ್ಯ ನುಡಿದಿರುತ್ತಾರೆ ಇದಕ್ಕೆ ನೀವೇನು ಹೇಳುವಿರಿ ?

ಉತ್ತರಃ *ಸುಳ್ಳು*

ಪ್ರಶ್ನೆ **4.** ಇದೇ ಸಾಕ್ಷಿದಾರರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ಆರೋಪಿಯಾದ ನೀವು ನೀಡಿದ ಚೆಕ್ಕನ್ನು ಪಿರ್ಯಾದುದಾರರು ತಮ್ಮ ಖಾತೆಯಿರುವ ಗೋಕಾಕ ಅರ್ಬನ್ ಕೋ ಆಪರೇಟಿವ್ ಕ್ರೆಡಿಟ್ ಬ್ಯಾಂಕ್ ಆಫ್ ಇಂಡಿಯಾ, ಗೋಕಾಕ ಶಾಖೆ ಇಲ್ಲಿಗೆ ನಗದೀಕರಣಕ್ಕೆ ಹಾಜರುಪಡಿಸಿದಾಗ, ಆರೋಪಿಯಾದ ನಿಮ್ಮ ಖಾತೆಯಲ್ಲಿ ಸಾಕಷ್ಟು ಹಣ ಇರುವುದಿಲ್ಲ (Funds Insufficient) ಎಂಬ ಹಿಂಬರಹ ಹಾಗೂ ಮೆಮೋದೊಂದಿಗೆ ದಿನಾಂಕ25-04-2022 ರಂದು ಸದರಿ ಚೆಕ್ ಅಮಾನ್ಯಗೊಂಡಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ ಇದಕ್ಕೆ ನೀವೇನು ಹೇಳುವಿರಿ ?

ಉತ್ತರಃ *ನನ್ನ ಚೆಕ್ಕುಗಳನ್ನು ದುರುಪಯೋಗಪಡಿಸಿಕೊಂಡು ನಗದೀಕರಣಕ್ಕಾಗಿ ಹಾಜರುಪಡಿಸಿಕೊಂಡಿರುತ್ತಾರೆ.*

ಪ್ರಶ್ನೆ 5. ಇದೇ ಸಾಕ್ಷಿದಾರರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ಪಿರ್ಯಾದುದಾರರು ಆರೋಪಿಯಾದ ನೀವು ನೀಡಿದ ಚೆಕ್ಕು ಅಮಾನ್ಯಗೊಂಡ ಬಗ್ಗೆ ತಮ್ಮ ವಕೀಲರ ಮುಖಾಂತರ ದಿನಾಂಕ 30-04-2022ರಂದು ತಿಳುವಳಿಕೆ ಪತ್ರವನ್ನು ಆರೋಪಿಯಾದ ನಿಮಗೆ ನೋಂದಾಯಿತ ಅಂಚೆ ಮೂಲಕ ಕಳುಹಿಸಿದ್ದು, ಸದರಿ ನೋಟಿಸು ದಿನಾಂಕ02-05-2022ರಂದು ಜಾರಿಯಾಗಿದ್ದರೂ ಸಹ ಆರೋಪಿಯಾದ ನೀವು ನಿಗದಿತ ಸಮಯದಲ್ಲಿ ಚೆಕ್ಕಿನ ಹಣವನ್ನು ಮರುಪಾವತಿ ಮಾಡಿರುವುದಿಲ್ಲ ಎಂದು ಸಾಕ್ಷ್ಯ ನುಡಿದಿರುತ್ತಾರೆ ಇದಕ್ಕೆ ನೀವೇನು ಹೇಳುವಿರಿ ?

ಉತ್ತರಃ *ನನಗೆ ಅಂತಹ ನೋಟೀಸು ಯಾವುದೂ ಜಾರಿಯಾಗಿರುವುದಿಲ್ಲ. ನ್ಯಾಯಾಲಯದಿಂದ ವಾರಂಟು ಬಂದಾಗ ಮಾತ್ರ ನನಗೆ ಪಿರ್ಯಾದುದಾರರು ಈ ಕೇಸು ಹಾಕಿರುವ ಸಂಗತಿ ಗೊತ್ತಾಗಿರುತ್ತದೆ. ತದನಂತರ ನಾನು ಫೋನ್ ಮಾಡಿ ವಿಚಾರಿಸಿದಾಗ ಮಾತನಾಡಿ ಮುಗಿಸಿಕೊಳ್ಳುತ್ತೇವೆ ಎಂದು ತಿಳಿಸಿದ್ದರು. ನಾನು ಅನೇಕ ಸಲ ಮಾತನಾಡಿಸಲು ಪ್ರಯತ್ನ ಮಾಡಿದರೂ ಸಹ ಪಿರ್ಯಾದುದಾರರು ತಮ್ಮ ಜೊತೆಗೆ ನನಗೆ ಮಾತನಾಡಬಾರದು ಎಂದು ಹೇಳುತ್ತಿದ್ದಾರೆ.*

ಪ್ರಶ್ನೆ 6. ಇದೇ ಸಾಕ್ಷಿದಾರರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ಆರೋಪಿತರಾದ ನೀವು ನೀಡಿದಂತ ಚೆಕ್ಕನ್ನು ನಿಪಿ.1, ಅದರಲ್ಲಿರುವ ಆರೋಪಿಯ ಸಹಿಯನ್ನು ನಿಪಿ.1(ಎ), ಬ್ಯಾಂಕ್‌ನವರು ನೀಡಿದಂತಹ ಹಿಂಬರಹವನ್ನು ನಿಪಿ.2, ತಿಳುವಳಿಕೆ ಪತ್ರದ ಕಚೇರಿ ಪ್ರತಿಯನ್ನು ನಿಪಿ.3, ಆರೋಪಿಗೆ ಕಳುಹಿಸಿರುವ ಅಂಚೆ ರಶೀದಿಯನ್ನು ನಿಪಿ.4, ಅಂಚೆ ಲಕೋಟೆಯನ್ನು ನಿಪಿ.5, ನಿಪಿ.5ರ ಅಂಚೆ ಲಕೋಟೆಯನ್ನು ತೆರೆದ ನ್ಯಾಯಾಲಯದಲ್ಲಿ ತೆರೆದು ಅದರಲ್ಲಿರುವ ನೋಟಿಸನ್ನು ನಿಪಿ.5(ಎ) ಎಂದು ಗುರುತಿಸಿ ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?

ಉತ್ತರಃ *ದುರುಪಯೋಗಪಡಿಸಿಕೊಂಡು ಹಾಜರುಪಡಿಸಿ ಗುರುತಿಸಿಕೊಂಡಿರುತ್ತಾರೆ.*

ಪ್ರಶ್ನೆ 7. ಈ ಪ್ರಕರಣದ ಬಗ್ಗೆ ನೀವು ನ್ಯಾಯಾಲಯಕ್ಕೆ ಹೆಚ್ಚಿಗೆ ಏನಾದರೂ ಹೇಳಲು ಬಯಸುವಿರಾ?

ಉತ್ತರಃ *ಇದೆ.*

ಪ್ರಶ್ನೆ 8. ನಿಮ್ಮ ಪರ ವಿಚಾರಣೆ ಮಾಡಲು ಸಾಕ್ಷಿಗಳೆನಾದರೂ ಇದೆಯಾ?

ಉತ್ತರಃ *ಇದೆ.*

(ಮೇಲಿನ ಹೇಳಿಕೆಗಳನ್ನು ದಿಃ 07-11-2024 ರಂದು ಆರೋಪಿಗೆ ತೆರೆದ ನ್ಯಾಯಾಲಯದಲ್ಲಿ ಕನ್ನಡ ಭಾಷೆಯಲ್ಲಿ ಓದಿ ಹೇಳಿ, ನಂತರ ಆರೋಪಿ ಕೊಟ್ಟ ಉತ್ತರಗಳನ್ನು ಯಥಾವತ್ತಾಗಿ ಬೆರಳಚ್ಚು ಮಾಡಿಸಲಾಯಿತು ಎಂದು ದೃಡೀಕರಿಸುತ್ತೇನೆ.)

**(ರಾಜೀವ ಗೋಳಸಾರ)**
**ಪ್ರಧಾನ ಪ್ರ.ದ.ನ್ಯಾ. ದಂ, ಗೋಕಾಕ.**